ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ಸಂಖ್ಯೆ: ಯುಎ-1/92,114/2021-22

ದಿನಾಂಕ: 11-11-2021

**"ಪ್ರಮಾಣಿತ ಅಂಚೆ ಮೂಲಕ"**

ಮಾನ್ಯ ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: 1. ದಿನಾಂಕ: 24-09-2021ರಂದು ನಡೆದ, ವಿಶೇಷ ಶಿಕ್ಷಣ ಮಂಡಳಿ ಸಭೆಯ ನಡವಳಿ.
2. ದಿನಾಂಕ:07-10-2021ರಂದು ನಡೆದ ಎರಡನೇ ಸಾಮಾನ್ಯ ಸಭೆಯ ನಡವಳಿ.
3. ದಿನಾಂಕ: 22-10-2021ರಂದು ನಡೆದ ವಿಶೇಷ ಶಿಕ್ಷಣ ಮಂಡಳಿ ಸಭೆಯ ನಡವಳಿಗಳನ್ನು ಕಳುಹಿಸುವ ಬಗ್ಗೆ

* * * * *

ದಿನಾಂಕ: 24-09-2021ರಂದು ಮಧ್ಯಾಹ್ನ 12-30 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ ವಿಶೇಷ ಶಿಕ್ಷಣ ಮಂಡಳಿ ಸಭೆಯ ನಡವಳಿ, ದಿನಾಂಕ: 07-10-2021ರಂದು ಬೆಳಗ್ಗೆ 11-30ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿ ಮತ್ತು ದಿನಾಂಕ:22-10-2021ರಂದು ಮಧ್ಯಾಹ್ನ 12-00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ ವಿಶೇಷ ಶಿಕ್ಷಣ ಮಂಡಳಿ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 03-12-2021ರ ಒಳಗಾಗಿ ಉಪಕುಲಸಚಿವ(ಪ್ರಾಧಿಕಾರ) ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

Lingaraju 11/11/21
ಉಪಕುಲಸಚಿವ(ಪ್ರಾಧಿಕಾರ)

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಗೌರವಾನ್ವಿತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05
7. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿಯ ಸಭಾಂಗಣದಲ್ಲಿ ದಿನಾಂಕ 24.09.2021ರ ಅಪರಾಹ್ನ 12.30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿ.**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಜಿ.ಹೇಮಂತ ಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ, ಬೆಂಗಳೂರು, ಇವರ ಪರವಾಗಿ<br>(ಎ) ಶ್ರೀ.ಕೆ.ಸಿ.ವೀರಭದ್ರಯ್ಯ,<br>ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಡಾ. ಕೆ.ವಿ.ಸುರೇಶ್ | ಸದಸ್ಯರು |
| 4. | ಶ್ರೀ ದಿನೇಶ್ ಎಂ ಗಾವಂಕರ್ | ಸದಸ್ಯರು |
| 5. | ಡಾ. ಬಿ.ಎನ್. ಆಶಾ | ಸದಸ್ಯರು |
| 6. | ಡಾ. ಎಂ.ಶಾರದ | ಸದಸ್ಯರು |
| 7. | ಡಾ. ಜಿ.ಗೋವಿಂದರಾಜು | ಸದಸ್ಯರು |
| 8. | ಶ್ರೀಮತಿ ನಾಗರತ್ನಮ್ಮ | ಸದಸ್ಯರು |
| 9. | ಡಾ. ಜೆ.ಎನ್.ವೆಂಕಟೇಶ್ | ಸದಸ್ಯರು |
| 10. | ಡಾ. ಬಿ. ರಾಜಣ್ಣ | ಸದಸ್ಯರು |
| 11. | ಡಾ. ವೆಂಕಟೇಶಯ್ಯ | ಸದಸ್ಯರು |
| 12. | ಶ್ರೀ ಎಸ್.ನಂದೀಶ್ | ಸದಸ್ಯರು |
| 13. | ಶ್ರೀ ಟಿ.ನಾಗರಾಜು | ಸದಸ್ಯರು |
| 14. | ಪ್ರೊ. ಕೆ.ವಿ.ಅಯ್ಯಣ್ಣ | ಸದಸ್ಯರು |
| 15. | ಶ್ರೀ ಹೆಚ್.ಪಿ.ಶಶಿಕುಮಾರ್ | ಸದಸ್ಯರು |
| 16. | ಡಾ. ಬಿಂದು ಅನಿಲ್ ಥಾಮಸ್ | ಸದಸ್ಯರು |
| 17. | ಶ್ರೀ. ಎಂ.ಶಿವಕುಮಾರ್ | ಸದಸ್ಯರು |
| 18. | ಪ್ರೊ .ವೈ.ಬಿ. ಬಸವರಾಜು | ಸದಸ್ಯರು |
| 19. | ಪ್ರೊ. ಮುಝಾಫರ್ ಹೆಚ್ ಅಸ್ಸಾದಿ | ಸದಸ್ಯರು |
| 20. | ಪ್ರೊ. ಎಂ.ಜಿ.ಮಂಜುನಾಥ್ | ಸದಸ್ಯರು |
| 21. | ಪ್ರೊ. ರಮೇಶ್ | ಸದಸ್ಯರು |
| 22. | ಪ್ರೊ. ಹೆಚ್.ರಾಜಶೇಖರ್ | ಸದಸ್ಯರು |
| 23. | ಪ್ರೊ. ಎಂ. ಎಸ್. ಶೇಖರ್ | ಸದಸ್ಯರು |
| 24. | ಪ್ರೊ. ಜಿ.ಆರ್.ಜನಾರ್ಧನ್ | ಸದಸ್ಯರು |
| 25. | ಡಾ. ಸರಸ್ವತಿ, ಗ್ರಂಥಪಾಲಕರು (ಪ್ರಾಭಾರ) | ಸದಸ್ಯರು |
| 26. | ಪ್ರೊ. ಎನ್. ಕೆ. ಲೋಕನಾಥ್, ನಿರ್ದೇಶಕರು. ಪಿ.ಎಂ.ಇ.ಬಿ<br>ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು (ಪ್ರಭಾರ) | ಸದಸ್ಯರು |

27. ಡಾ: ಎಸ್.ಟಿ ರಾಮಚಂದ್ರ,, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ. — ಸದಸ್ಯರು

28. ಡಾ. ಕೃಷ್ಣಯ್ಯ ನಿರ್ದೇಶಕರು, (ಪ್ರಭಾರ) ದೈಹಿಕ ಶಿಕ್ಷಣ — ಸದಸ್ಯರು

29. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು

30. ಡಾ. ಸಂಗೀತ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು — ಸದಸ್ಯರು

31. ಪ್ರೊ. ಆರ್.ಶಿವಪ್ಪ, ಕುಲಸಚಿವರು — ಸದಸ್ಯ ಕಾರ್ಯದರ್ಶಿ

**ವಿಶೇಷ ಆಹ್ವಾನಿತರು**

32. ಪ್ರೊ. ಜಿ.ವೆಂಕಟೇಶ್‌ಕುಮಾರ್

**ಸಭೆಯಲ್ಲಿ ಗೈರುಹಾಜರಾಗಿರುವವರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು
2. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಮಾನ್ಯ ವಿಧಾನ ಸಭಾ ಸದಸ್ಯರು
3. ಶ್ರೀ ಪ್ರೀತಂ ಜೆ ಗೌಡ, ಮಾನ್ಯ ವಿಧಾನ ಸಭಾ ಸದಸ್ಯರು
4. ಶ್ರೀ ಎಂ.ಶ್ರೀನಿವಾಸ್, ಮಾನ್ಯ ವಿಧಾನ ಸಭಾ ಸದಸ್ಯರು
5. ಶ್ರೀ ಎಲ್.ನಾಗೇಂದ್ರ, ಮಾನ್ಯ ವಿಧಾನ ಸಭಾ ಸದಸ್ಯರು
6. ಶ್ರೀ ಎಂ.ಎ.ಗೋಪಾಲಸ್ವಾಮಿ, ಮಾನ್ಯ ವಿಧಾನ ಪರಿಷತ್ ಸದಸ್ಯರು
7. ಶ್ರೀ.ಆರ್.ಧರ್ಮಸೇನ, ಮಾನ್ಯ ವಿಧಾನ ಪರಿಷತ್ ಸದಸ್ಯರು
8. ಡಾ. ನಿರ್ಮಲ.ಹೆಚ್.ಎಂ.
9. ಡಾ. ಎಸ್.ಟಿ.ಪ್ರಶಾಂತ್
10. ಡಾ. ಭಾಗ್ಯಲಕ್ಷ್ಮಿ
11. ಶ್ರೀ ಎಂ.ಸಿ.ರಾಜಶೇಖರ್
12. ಪ್ರೊ. ನಿಂಗಮ್ಮ ಸಿ ಬೆಟ್ಸೂರ್

ಮೊದಲಿಗೆ ಮಾನ್ಯ ಕುಲಸಚಿವರು ಶಿಕ್ಷಣ ಮಂಡಳಿಯ ವಿಶೇಷ ಸಭೆಗೆ ಆಗಮಿಸಿರುವ ಎಲ್ಲಾ ಗೌರವಾನ್ವಿತ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು ಹಾಗೂ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳು ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸಂಯೋಜನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಾರ್ಚ್ 31ರೊಳಗೆ ಸಲ್ಲಿಸಬೇಕಿತ್ತು ಆದರೆ ಕೋವಿಡ್-19 ನಿಂದಾಗಿ ಮುಂದೂಡಲಾಗಿ, ಈ ತಿಂಗಳ 30 ರೊಳಗೆ ಸರ್ಕಾರಕ್ಕೆ ಈ ಸಂಯೋಜನಾ ವರದಿಗಳನ್ನು ಶಿಫಾರಸು ಮಾಡಿ ಕಳುಹಿಸಿಕೊಡಬೇಕಾಗಿರುವುದರಿಂದ ಈ ವಿಶೇಷ ತುರ್ತು ಸಭೆಯನ್ನು ನಡೆಸಲಾಗುತ್ತಿದೆ, ಒಟ್ಟು 207 ಕಾಲೇಜುಗಳು ಇವೆ, ಸರ್ಕಾರ ಸಹ ಅನುಮತಿ ನೀಡಿದ್ದು, ಯಾವ ಕಾಲೇಜುಗಳು ಮುಂದುವರಿದಿದೆ ಅದನ್ನು ಆನ್‌ಲೈನ್‌ನಲ್ಲಿ, ಹೊಸ ಕಾಲೇಜುಗಳು ಹಾಗೂ ಹೊಸ ಕೋರ್ಸ್‌ಗಳಿಗೆ ಮಾತ್ರ ಆಫ್‌ಲೈನ್‌ನಲ್ಲಿ ಮಾಡಲಾಗಿದೆ, ಇದನ್ನು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ತಿಳಿಸುತ್ತಾರೆ ಎಂದು ಹೇಳಿದರು.

ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಪ್ರೊ.. ಎನ್. ಕೆ. ಲೋಕನಾಥ್ ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸಂಯೋಜಕ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯದ ನಿಯಮದಲ್ಲಿ 2021-2022ನೇ ಸಾಲಿಗೆ ಸಂಯೋಜಿಸಿ ನವೀಕರಿಸುವುದು ಹಾಗೂ ಹೊಸದಾಗಿ ಸ್ಥಾಪಿಸಿರುವ ಕಾಲೇಜುಗಳಿಗೆ ಕೋರ್ಸ್‌ಗಳಿಗೆ ಸಂಯೋಜನೆ ನೀಡುವುದು ಎಂದು ತಿಳಿಸಿದರು, ಮುಂದುವರೆದು ವಿಶ್ವವಿದ್ಯಾನಿಲಯದ ನಿಯಮ 200, 59ರ ಉಪ ಪ್ರಕರಣ ಸಂಯೋಜನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಾರ್ಚ್ 31ರೊಳಗೆ ಸಲ್ಲಿಸಬೇಕಿತ್ತು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ದೇಶನದನ್ವಯ ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯ ಕಾರಣ ರಜೆ ಘೋಷಿಸಿದ್ದರಿಂದ ಈ ಪ್ರಕ್ರಿಯೆಯನ್ನು ಮುಂದೂಡಿ, ಶಿಕ್ಷಣ ಇಲಾಖೆಯ ಆದೇಶದಂತೆ ಸಂಯೋಜನಾ ಪ್ರಕ್ರಿಯೆಯನ್ನು ಅಭಿವೃದ್ಧಿ ಪಡಿಸಿರುವ ತಂತ್ರಾಂಶದಲ್ಲಿ ಕೈಗೊಳ್ಳಲು ಸೂಚಿಸಿರುವುದರಿಂದ 2021-22ನೇ ಸಾಲಿನ ಎಲ್ಲಾ ಸಂಯೋಜಿತ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಗಳನ್ನು virtual meeting ನ ಮೂಲಕ ಕೈಗೊಳ್ಳಲಾಗಿರುತ್ತದೆ. ಸಿದ್ಧ ಪಡಿಸಿರುವ ವರದಿಗಳನ್ನು ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆಗಾಗಿ ಮಂಡಿಸಿದೆ ಎಂದು ತಿಳಿಸಿದರು.

| ವಿಷಯ ಸಂಖ್ಯೆ | ವಿಷಯ |
|---|---|
| ವಿಶೇಷ ಸಭೆ-01 | 2021-2022ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು Virtual Meeting ಮೂಲಕ ಆನ್‌ಲೈನ್ ಸಂಯೋಜನಾ ವರದಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಬಗ್ಗೆ. |
| | 2021-22ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು /ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು/ಸಂಪೂರ್ಣ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳನ್ನು ನವೀಕರಿಸಲು/ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು/ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯುಜಿಸಿ ಆ್ಯಡ್‌ಆನ್‌ನ ಕೋರ್ಸುಗಳನ್ನು ಮುಂದುವರಿಸಲು /ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಸ್ಥಳೀಯ ವಿಚಾರಣಾ ಸಮಿತಿಯವರು ಸಲ್ಲಿಸಿರುವ ಆನ್‌ಲೈನ್ ಸಂಯೋಜನಾ ವರದಿಯ ಸಾರಾಂಶ.<br><br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59(3)ರ ಮೇರೆಗೆ ಕೆಳಕಂಡಂತೆ ಕಾಲೇಜುವಾರು/ಶಿಕ್ಷಣ ಸಂಸ್ಥೆಗಳು ಸಂಯೋಜನೆಯನ್ನು ಮುಂದುವರೆಸಲು, ಹೊಸದಾಗಿ ಸಂಯೋಜನೆ ನೀಡಲು, ಪ್ರವೇಶಾತಿ ಹೆಚ್ಚಳ ಮಾಡಲು, ಶಾಶ್ವತ ಸಂಯೋಜನೆ ನೀಡಲು, ವಿಶ್ವವಿದ್ಯಾನಿಲಯದಘಟಕ ಕಾಲೇಜುಗಳು ಹಾಗೂ ಸ್ವಾಯತ್ತ ಕಾಲೇಜುಗಳನ್ನು |

| | |
|---|---|
| | ಹೊರತುಪಡಿಸಿ ಸ್ಥಳೀಯ ವಿಚಾರಣಾ ಸಮಿತಿ ಶಿಫಾರಸ್ಸು ಮಾಡಿರುವ ಕಾಲೇಜುಗಳ ವಿವರ ಮತ್ತು ಪಟ್ಟಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಪ್ರೊ. ಎನ್. ಕೆ. ಲೋಕನಾಥ್ ರವರು ಮಂಡಿಸಿದರು.<br><br>ಸರ್ಕಾರಿ ಗೃಹ ವಿಜ್ಞಾನ ಕಾಲೇಜಿಗೆ 10 ಹೆಚ್ಚುವರಿ ಸೀಟುಗಳನ್ನು, ಎಂ.ಎಸ್ಸಿ ಆರ್ಡಿಯೋಲಜಿ ಮತ್ತು ಎಂ.ಎಸ್ಸಿ. ಸ್ಪೀಚ್ ಅಂಡ್ ಹಿಯರಿಂಗ್‌ಗೆ 10 ಸೀಟುಗಳನ್ನು ಹೆಚ್ಚುವರಿಯಾಗಿ ಕೇಳರುತ್ತಾರೆ ಎಂದು ಪ್ರೊ. ಎನ್.ಕೆ. ಲೋಕನಾಥ್ ರವರು ಸಭೆಯಲ್ಲಿ ತಿಳಿಸಿದರು.<br><br>ಡಾ. ಶಶಿಕುಮಾರ್‌ರವರು ಹಾಗೂ ಪ್ರೊ.ರಮೇಶ್ ರವರು ಮಾತನಾಡಿ, ಹೆಚ್ಚುವರಿ ಸೀಟುಗಳನ್ನು ಕೇಳಿರುವ ಕಾಲೇಜುಗಳ ಸ್ಥಳ ಪರಿಶೀಲನೆ ಮಾಡಿದ್ದೀರಾ? ಹಾಗೂ ಮೂಲಭೂತ ಸೌಲಭ್ಯಗಳು ಇವೆಯಾ? ಎಂದು ಪ್ರಶ್ನಿಸಿದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಪ್ರಸ್ತುತ ಪಿಯುಸಿಯಲ್ಲಿ ಸುಮಾರು 2 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಾತಿ ಕೋರಿ ಬರುವುದರಿಂದ, ಎಲ್ಲೆಲ್ಲಿ ಹೆಚ್ಚಿನ ಇಂಟೇಕ್ ಕೇಳಿದ್ದಾರೆ ಅಲ್ಲಿ ಸಾಧ್ಯವಾದಷ್ಟು ಕೊಡಿ ಎಂದು ಸರ್ಕಾರವೂ ಸಹ ಹೇಳಿದೆ ಆದುದರಿಂದ ಹೆಚ್ಚುವರಿ ಪ್ರವೇಶಾತಿಯನ್ನು ನೀಡಬೇಕಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>NCTE ಮಾನ್ಯತೆ ಇಲ್ಲದ ಕಾರಣ 2021-22ನೇ ಸಾಲಿಗೆ ವಿಜಯ ಶಿಕ್ಷಣ ಮಹಾವಿದ್ಯಾಲಯ, ಪಾಂಡವಪುರ, ಯಡತೊರೆ ಶಿಕ್ಷಣ ಮಹಾವಿದ್ಯಾಲಯ, ಕೆ.ಆರ್. ನಗರ, ಮೌಲಾನಾ ಆಜಾದ್ ಶಿಕ್ಷಣ ಕಾಲೇಜು, ಮೈಸೂರು, ವಿ.ಎಂ.ಅಂಗಯ್ಯ ಶಿಕ್ಷಣ ಕಾಲೇಜು, ಸೋಮನಹಳ್ಳಿ. ಮದ್ದೂರು ತಾ., ಮಂಡ್ಯ ಜಿಲ್ಲೆ. ಈ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಿರುವುದಿಲ್ಲ ಎಂದು ಪ್ರೊ. ಎನ್.ಕೆ. ಲೋಕನಾಥ್ ರವರು ಸಭೆಗೆ ತಿಳಿಸಿದರು.<br><br>ಶ್ರೀ.ಚನ್ನಕೇಶವ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ ಈ ಕಾಲೇಜು 2009-10ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಕೊರತೆಯಿಂದಾಗಿ ಮುಚ್ಚಲಾಗಿತ್ತು, ದಿನಾಂಕ 09-04-2021 ರ ಸರ್ಕಾರದ ಆದೇಶ ಸಂಖ್ಯೆ ಇಡಿ 367 ಯುಪಿಸಿ 219ರ ಆದೇಶದನ್ವಯ ಕಾಲೇಜನ್ನು ಮುಂದುವರೆಸಲು ಸರ್ಕಾರವು ಆದೇಶಿಸಿದೆ ಈ ಹಿನ್ನಲೆಯಲ್ಲಿ ಮಾನ್ಯ ಕುಲಪತಿಗಳ ಅದೇಶದಂತೆ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಶಿಫಾರಸು ಮಾಡಿರುವುದರಿಂದ 2021-22ನೇ ಶೈಕ್ಷಣಿಕ ಸಾಲಿನಿಂದ ಸಂಯೋಜನೆ ಮುಂದುವರೆಸಲು ಸಭೆಯು ಅನುಮತಿ ನೀಡಿತು.<br><br>2021-22ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು ಇಲ್ಲಿ ಸಂಜೆ ಕಾಲೇಜು ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ ಇಡಿ.88, ಹೆಚ್.ಪಿಸಿ 2021, ಬೆಂಗಳೂರು, ದಿನಾಂಕ 24-08-2021ರ ಆದೇಶದಲ್ಲಿ ಬಿ.ಕಾಂ., ಬಿಸಿಎ ಕೋರ್ಸ್‌ಗಳನ್ನು ಪ್ರಾರಂಭಿಸಲು ಸರ್ಕಾರ ಆದೇಶಿಸಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅದೇಶದಂತೆ ಅಲ್ಲಿನ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಶಿಫಾರಸು ಮಾಡಿರುವುದರಿಂದ ಬಿ.ಕಾಂ-60, ಬಿಸಿಎ-40 (ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಟ್ಟು) ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಗಳೊಂದಿಗೆ 2021- |

| | |
|---|---|
| | 22ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ಕುವೆಂಪುನಗರ, ಮೈಸೂರು ಈ ಕಾಲೇಜಿಗೆ ಹೊಸ ಸಂಯೋಜನೆ ನೀಡಲಾಗಿದೆ ಎಂದು ಸಭೆಗೆ ಪ್ರೊ. ಎನ್.ಕೆ. ಲೋಕನಾಥ್ ರವರು ತಿಳಿಸಿದರು.<br><br>ಸದಸ್ಯರೊಬ್ಬರು ಮಾತನಾಡಿ ನಿಬಂಧನೆಗೆ ಒಳಪಟ್ಟಿದ್ದರೆ ಮಾತ್ರ ಬಿ.ಸಿ.ಎ. ಕೋರ್ಸ್‌ಗೆ ಅನುಮತಿ ನೀಡಬೇಕೆಂದು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ರಮೇಶ್ ರವರು ಮಾತನಾಡಿ, ಬೆಳಗಿನ ಕಾಲೇಜಿನಲ್ಲಿ ಬೋಧನೆ ಮಾಡುವವರನ್ನೇ ಸಂಜೆ ಕಾಲೇಜಿಗೂ ಸಹ ಬೋಧನೆ ಮಾಡಲು ನಿಯೋಜಿಸುತ್ತಾರೆ, ಇದನ್ನು ನಿಲ್ಲಿಸಬೇಕು ಮತ್ತು ಬೆಳಗಿನ ಕಾಲೇಜು ಮತ್ತು ಸಂಜೆ ಕಾಲೇಜುಗಳಿಗೆ ಪ್ರತ್ಯೇಕ ಉಪನ್ಯಾಸಕರುಗಳನ್ನು ಮತ್ತು ಪ್ರಾಂಶುಪಾಲರನ್ನು ನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು. ಕೆಲವು ಖಾಸಗಿ ಕಾಲೇಜುಗಳಲ್ಲಿ ಪ್ರಾಂಶುಪಾಲರಿಗೆ ರೂ.20,000/-, ರೂ.25,000/-, ಉಪನ್ಯಾಸಕರುಗಳಿಗೆ ರೂ.10,000/- ವೇತನ ಪಾವತಿಸುತ್ತಿದ್ದಾರೆ, ಕೆಲವು ಉಪನ್ಯಾಸಕರುಗಳು ಡಾಕ್ಟರೇಟ್ ಸಹ ಹೊಂದಿರುವುದರಿಂದ ಈ ಮಾನದಂಡ ಮಾಡಿ ಸಂಚಿತ ವೇತನ(Consolidated pay) ರೂ.40,000/- ಅಥವಾ 50,000/-ಗಳನ್ನು ನೀಡಬೇಕೆಂದು ಮನವಿ ಮಾಡಿದರು ಅಥವಾ ರಾಜ್ಯ ಸರ್ಕಾರ ನಿಗಧಿಪಡಿಸಿದ ವೇತನವನ್ನೇ ನೀಡಬೇಕೆಂದು ಮಾನ್ಯ ಕುಲಪತಿಯವರಿಗೆ ಮನವಿ ಮಾಡಿದರು.<br><br>ಕುಲಪತಿಯವರು ಮಾತನಾಡಿ, ನಾವು ಸಂಚಿತ ವೇತನ(Consolidated pay) ಕೊಡಿ ಎಂದು ಖಾಸಗಿ ವಿದ್ಯಾಸಂಸ್ಥೆಗಳಿಗೆ ಹೇಳುವಂತಿಲ್ಲ, ಆದುದರಿಂದ ಈ ಸಂಬಂಧ ಸರ್ಕಾರಕ್ಕೆ ಶಿಫಾರಸು ಮಾಡಿ ಪತ್ರ ಬರೆಯುವುದಾಗಿ ತಿಳಿಸಿದರು.<br><br>ಪ್ರೊ. ಕೆ.ವಿ. ಅಯ್ಯಣ್ಣ ರವರು ಮಾತನಾಡಿ, ಕೆಲವು ಖಾಸಗಿ ಕಾಲೇಜುಗಳಲ್ಲಿ 60% ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾತಿ ನೀಡುತ್ತಿದ್ದಾರೆ, 60% ಗಳು ಇಲ್ಲದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡುತ್ತಿಲ್ಲವೆಂದು ದೂರಿದರು,<br><br>ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಮಾತನಾಡಿ, 30% ಮ್ಯಾನೇಜ್ಮೆಂಟ್‌ನ ಸೀಟುಗಳು ಇದ್ದು, ಮೆರಿಟ್ ಸೀಟುಗಳು ಮಾತ್ರ ವಿಶ್ವವಿದ್ಯಾನಿಲಯದ ನಿಯಮಗಳನ್ವಯ ಭರ್ತಿ ಮಾಡಲಾಗುತ್ತದೆ ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ಸರ್ಕಾರವೇ ಸೀಟುಗಳನ್ನು ಭರ್ತಿ ಮಾಡುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು, ಸೀಟುಗಳು ಭರ್ತಿಯಾಗದಿದ್ದರೆ ಎಸ್ಸಿ/ಎಸ್ಟಿ ಸೀಟುಗಳನ್ನು ಬಿಟ್ಟು ಉಳಿದ ಸೀಟುಗಳನ್ನು ವರ್ಗಾವಣೆ ಮಾಡಿಕೊಳ್ಳಬಹುದು, ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲು ಯಾವುದೇ ಶೇಕಡವಾರು ಕಡಿತ ಇರುವುದಿಲ್ಲ, 60 ಸೀಟುಗಳನ್ನು ಭರ್ತಿ ಮಾಡದೆ ಹೋದರೆ ವಿಶ್ವವಿದ್ಯಾನಿಲಯವು ಸಂಯೋಜನೆ ಮುಂದುವರೆಸಲು ಹಾಗೆ ಮಾಡದಿದ್ದರೆ ಅಂತಹ ಕಾಲೇಜುಗಳ ವಿವರಗಳನ್ನು ಬರವಣಿಗೆಯಲ್ಲಿ ನೀಡಿದರೆ ಮುಂದಿನ ಸೂಕ್ತ ಕ್ರಮ ಜರುಗಿಸುವುದಾಗಿ ಹಾಗೂ ಇದರ ಬಗ್ಗೆ ಒಂದು ಸುತ್ತೋಲೆ ಹೊರಡಿಸಬೇಕೆಂದು ಕುಲಪತಿಗಳು ಸಭೆಗೆ ತಿಳಿಸಿದರು. |
| ತೀರ್ಮಾನ | **2021-22ನೇ ಶೈಕ್ಷಣಿಕ ಸಾಲಿಗೆ Virtual Meeting ಮೂಲಕ ಕಾಲೇಜುಗಳಲ್ಲಿನ ಮೂಲಭೂತ ಸೌಕರ್ಯಗಳು ಮತ್ತು ಇನ್ನಿತರ ಅಂಶಗಳ ಬಗೆಗಿನ ದಾಖಲೆಗಳನ್ನು ಪರಿಶೀಲಿಸಿ, ಸಲ್ಲಿಸಿದ ಸ್ಥಳೀಯ ತನಿಖಾ ಸಮಿತಿಯ ಸಂಯೋಜನಾ ವರದಿಗಳನ್ನು ವಿದ್ಯಾ ವಿಷಯಕ ಪರಿಷತ್ತು ಸಭೆಯು ಅನುಮೋದಿಸಿತು.** |

| ವಿಶೇಷ ಸಭೆ-02 | **Starting of University School of Engineering and creation of Faculty of Engineering– reg** |
|---|---|
| | The Government of Karnataka has decided to implement National Education Policy (NEP) 2020 in all the Universities in the State of Karnataka. As such the University has also decided to introduce multidisciplinary studies under NEP-2020 in principle from the Academic year 2021-22<br><br>In the background of the above the University has proposed and planning to start self-finance constituent University School of Engineering college from the academic year 2021-22.<br><br>The subject of starting of University Engineering college has been placed before the authorities of the University and it has been decided to approve the same after obtaining the formal approval of the AICTE, New Delhi.<br><br>The University has submitted its proposal to start self-finance constituent Engineering college from the academic year 2021-22 with the NOC issued by the Government of Karnataka.<br><br>The AICTE, New Delhi in its letter dated 14th July 2021 has conveyed its approval to start the constituent self-finance University School of Engineering from the academic year 2021-22 in the following courses:<br><br>➢ CIVIL ENVIRONMENTAL ENGINEERING<br>➢ ARTIFICIAL INTELLIGENCE AND MACHINE LEARNING<br>➢ ARTIFICIAL INTELLIGENCE (AI) AND DATA SCIENCE<br>➢ COMPUTER SCIENCE AND DESIGN<br>➢ BIOMEDICAL AND ROBOTIC ENGINEERING<br>The Syndicate at its meeting held on 28-5-2021 has approved for the creation of faculty of Engineering. Further, a draft statute has been prepared for the establishment and starting of University School of Engineering. |
| Decision | **The draft statutes for Starting of University School of Engineering and creation of Faculty of Engineering are Approved.** |

ಇತರೆ ವಿಷಯಗಳು:

1. ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ವಿದ್ಯಾ ವಿಷಯಕ ಪರಿಷತ್‌ನ ಸದಸ್ಯರನ್ನು ಸಹ ಸ್ಥಳೀಯ ತನಿಖಾ ಸಮಿತಿಯ ಸದಸ್ಯರನ್ನಾಗಿ ಸೇರ್ಪಡೆ ಮಾಡಿಕೊಳ್ಳಬೇಕೆಂದು ಕೋರಿದರು. ಇದಕ್ಕುತ್ತರವಾಗಿ, ಸರ್ಕಾರಕ್ಕೆ ಪತ್ರ ಬರೆಯುವುದಾಗಿ ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು.

2. ಶ್ರೀ ಹೆಚ್.ಪಿ. ಶಶಿಕುಮಾರ್ ರವರು ಮಾತನಾಡಿ 101ನೇ ಘಟಿಕೋತ್ಸವ ಕಾರ್ಯಕ್ರಮವು ಅಚ್ಚುಕಟ್ಟಾಗಿ ನೆರವೇರಿಸಿದ ಮಾನ್ಯ ಕುಲಪತಿಯವರಿಗೆ ಹೃತ್ಪೂರ್ವಕವಾಗಿ ಅಭಿನಂದನೆ ಸಲ್ಲಿಸಿದರು ಹಾಗೂ ಸಮಿತಿಯ ಸಭಾ ಸೂಚಿಯನ್ನು ಮುಂಚಿತವಾಗಿ ಕಳುಹಿಸಿಕೊಡಲು ಕೋರಿದರು.

3. ಶ್ರೀ.ಕೆ.ಸಿ.ವೀರಭದ್ರಯ್ಯ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆಯವರು ಮಾತನಾಡಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗುತ್ತಿರುವುದರಿಂದ ಅರಿವುಮೂಡಿಸಲು ಎರಡು ಕಾರ್ಯಗಾರಗಳನ್ನು ಎಲ್ಲಾ ಕಾಲೇಜು/ವಿಭಾಗಗಳಲ್ಲಿ ನಡೆಸುವಂತೆ ಮಾನ್ಯ ಕುಲಪತಿಯವರಲ್ಲಿ ಮನವಿ ಮಾಡಿದರು, ಇದಕ್ಕೆ ಮಾನ್ಯ ಕುಲಪತಿಯವರು ಮಾತನಾಡಿ ಎನ್.ಇ.ಪಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸಲಾಗುವುದು ಹಾಗೂ ತಿಂಗಳಿಗೆ 02 ಕಾರ್ಯಾಗಾರವನ್ನು ಮಾಡುವುದಾಗಿ ತಿಳಿಸಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ | ಕುಲಪತಿಗಳು ಮತ್ತು ಅಧ್ಯಕ್ಷರು |

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 07-10-2021ರ ಗುರುವಾರದಂದು ಪೂರ್ವಾಹ್ನ 11.30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡವಳಿ.**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಜಿ.ಹೇಮಂತ ಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ, ಬೆಂಗಳೂರು | ಸದಸ್ಯರು |
| 2(ಎ) | ಶ್ರೀ ಕೆ.ಸಿ.ವೀರಭದ್ರಯ್ಯ,<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ<br>ಪ್ರಾದೇಶಿಕ ಕಛೇರಿ, ಮೈಸೂರು | ಸದಸ್ಯರು |
| 3. | ಡಾ: ಕೆ.ವಿ.ಸುರೇಶ್ | ಸದಸ್ಯರು |
| 4. | ಶ್ರೀ ದಿನೇಶ್ ಎಂ ಗಾವಂಕರ್ | ಸದಸ್ಯರು |
| 5. | ಡಾ. ಎಂ.ಶಾರದ | ಸದಸ್ಯರು |
| 6. | ಡಾ: ಜಿ.ಗೋವಿಂದರಾಜು | ಸದಸ್ಯರು |
| 7. | ಶ್ರೀಮತಿ ನಾಗರತ್ನಮ್ಮ | ಸದಸ್ಯರು |
| 8. | ಡಾ. ಜೆ.ಎನ್.ವೆಂಕಟೇಶ್ | ಸದಸ್ಯರು |
| 9. | ಡಾ: ಬಿ.ರಾಜಣ್ಣ | ಸದಸ್ಯರು |
| 10. | ಡಾ. ವೆಂಕಟೇಶಯ್ಯ | ಸದಸ್ಯರು |
| 11. | ಶ್ರೀ ಎಸ್.ನಂದೀಶ್ | ಸದಸ್ಯರು |
| 12. | ಶ್ರೀ ಟಿ.ನಾಗರಾಜು | ಸದಸ್ಯರು |
| 13. | ಡಾ. ಎಸ್.ಟಿ.ಪ್ರಶಾಂತ್ | ಸದಸ್ಯರು |
| 14. | ಶ್ರೀ ಹೆಚ್.ಪಿ.ಶಶಿಕುಮಾರ್ | ಸದಸ್ಯರು |
| 15. | ಡಾ. ಬಿಂದು ಅನಿಲ್ ಥಾಮಸ್ | ಸದಸ್ಯರು |
| 16. | ಶ್ರೀ ಎಂ.ಸಿ.ರಾಜಶೇಖರ್ | ಸದಸ್ಯರು |
| 17. | ಡಾ: ವೈ.ಬಿ.ಬಸವರಾಜು | ಸದಸ್ಯರು |
| 18. | ಪ್ರೊ. ಮುಜಾಫರ್ ಅಸ್ಸಾದಿ | ಸದಸ್ಯರು |
| 19. | ಪ್ರೊ. ಜಿ.ವೆಂಕಟೇಶ್‌ಕುಮಾರ್ | ಸದಸ್ಯರು |
| 20. | ಪ್ರೊ. ಎಂ.ಜಿ.ಮಂಜುನಾಥ್ | ಸದಸ್ಯರು |
| 21. | ಪ್ರೊ. ರಮೇಶ್ | ಸದಸ್ಯರು |
| 22. | ಪ್ರೊ. ನಿಂಗಮ್ಮ ಸಿ ಬೆಟ್ಸೂರ್ | ಸದಸ್ಯರು |
| 23. | ಪ್ರೊ. ಹೆಚ್.ರಾಜಶೇಖರ್ | ಸದಸ್ಯರು |
| 24. | ಪ್ರೊ.ಜಿ.ಆರ್.ಜನಾರ್ಧನ | ಸದಸ್ಯರು |
| 25. | ಡಾ: ಪಿ. ಸರಸ್ವತಿ, ಗ್ರಂಥಪಾಲಕರು (ಪ್ರಭಾರ) | ಸದಸ್ಯರು |

26. ಪ್ರೊ. ಎನ್.ಕೆ. ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. ಸದಸ್ಯರು

27. ಪ್ರೊ. ಎನ್.ಕೆ. ಲೋಕನಾಥ್,
ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ ಸದಸ್ಯರು

28. ಡಾ: ಪಿ. ಕೃಷ್ಣ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ಸದಸ್ಯರು

29. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) ಸದಸ್ಯರು

30. ಡಾ: ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು ಸದಸ್ಯರು

31. ಪ್ರೊ. ಆರ್.ಶಿವಪ್ಪ, ಕುಲಸಚಿವರು ಸದಸ್ಯ ಕಾರ್ಯದರ್ಶಿ

<u>ಸಭೆಯಲ್ಲಿ ಗೈರುಹಾಜರಾಗಿರುವವರು:</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು ಸದಸ್ಯರು
2. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಎಂ.ಎಲ್.ಎ ಸದಸ್ಯರು
3. ಶ್ರೀ ಪ್ರೀತಂ ಜೆ ಗೌಡ, ಎಂ.ಎಲ್.ಎ ಸದಸ್ಯರು
4. ಶ್ರೀ ಎಂ.ಶ್ರೀನಿವಾಸ್, ಎಂ.ಎಲ್.ಎ ಸದಸ್ಯರು
5. ಶ್ರೀ ಎಲ್.ನಾಗೇಂದ್ರ, ಎಂ.ಎಲ್.ಎ ಸದಸ್ಯರು
6. ಶ್ರೀ ಎಂ.ಎ.ಗೋಪಾಲಸ್ವಾಮಿ, ಎಂ.ಎಲ್.ಎ ಸದಸ್ಯರು
7. ಶ್ರೀ ಆರ್.ಧರ್ಮಸೇನ, ಎಂ.ಎಲ್.ಸಿ ಸದಸ್ಯರು
8. ಡಾ. ಬಿ.ಎನ್.ಆಶಾ ಸದಸ್ಯರು
9. ಡಾ. ನಿರ್ಮಲ ಹೆಚ್.ಎಂ. ಸದಸ್ಯರು
10. ಪ್ರೊ. ಕೆ.ವಿ.ಅಯ್ಯಣ್ಣ ಸದಸ್ಯರು
11. ಡಾ. ಭಾಗ್ಯಲಕ್ಷ್ಮಿ ಸದಸ್ಯರು
12. ಶ್ರೀ ಎಂ.ಶಶಿಕುಮಾರ್ ಸದಸ್ಯರು
13. ಪ್ರೊ. ಎಂ.ಎಸ್.ಶೇಖರ್ ಸದಸ್ಯರು
14. ಡಾ: ಎಸ್. ಟಿ. ರಾಮಚಂದ್ರ,
ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ ಸದಸ್ಯರು

ಮೊದಲಿಗೆ ಮಾನ್ಯ ಕುಲಸಚಿವರು ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನೂ ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

**ನಂತರ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.**

| ವಿಷಯ ಸಂಖ್ಯೆ | ವಿಷಯ |
|---|---|
| I.1 | ದಿನಾಂಕ: 13-07-2021ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 13-07-2021ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.** |

| ಸಿಂಡಿಕೇಟ್ ಅಥವಾ ಕುಲಪತಿಗಳು ಮಂಡಿಸಿರುವ ವಿಷಯಗಳು: | |
|---|---|
| II.I | 2019-20ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಎ. ಮಹಿಳಾ ಅಧ್ಯಯನದ ದ್ವಿತೀಯ ಸೆಮಿಸ್ಟರ್‌ನಲ್ಲಿ ಇರುವ Minor Project-1/Disertation ಅನ್ನು ಪತ್ರಿಕೆ-1 Minor Project-1/Disertation ಶೀರ್ಷಿಕೆಯಡಿ ತೃತೀಯ ಸೆಮಿಸ್ಟರ್‌ಗೆ ಸ್ಥಳಾಂತರಿಸುವ ಕುರಿತು ಅನುಮೋದನೆ ನೀಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಸಮರ್ಥನೆಗಾಗಿ. |
| ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಎ. ಮಹಿಳಾ ಅಧ್ಯಯನದ ದ್ವಿತೀಯ ಸೆಮಿಸ್ಟರ್‌ನಲ್ಲಿ ಇರುವ Minor Project-1/Disertation ಅನ್ನು ಪತ್ರಿಕೆ-1 Minor Project-1/Disertation+2 ಶೀರ್ಷಿಕೆಯಡಿ ತೃತೀಯ ಸೆಮಿಸ್ಟರ್‌ಗೆ ಸ್ಥಳಾಂತರಿಸುವ ಕುರಿತು ವಿದ್ಯಾನಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಅನುಮೋದನೆ ನೀಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.2 | ಮಹಾಲಕ್ಷ್ಮಿ ಎಂ. ಇವರು 2015-16ನೇ ಸಾಲಿನಲ್ಲಿ ಗುರುಕುಲ ಕಾಲೇಜ್ ಆಫ್ ಎಜುಕೇಷನ್, ಮೈಸೂರು ಇಲ್ಲಿ 3ನೇ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಿಲ್ಲದಿರುವುದರಿಂದ ಪರೀಕ್ಷೆ ಬರೆಯಲು ಅನುಮತಿ ಕೋರಿರುವ ಬಗ್ಗೆ. |
| ತೀರ್ಮಾನ | **ಮಹಾಲಕ್ಷ್ಮಿ ಎಂ. ಇವರು 2015-16ನೇ ಸಾಲಿನಲ್ಲಿ ಬಿ.ಇಡಿ ಶಿಕ್ಷಣಕ್ಕೆ ಗುರುಕುಲ ಕಾಲೇಜ್ ಆಫ್ ಎಜುಕೇಷನ್, ಮೈಸೂರು ಇಲ್ಲಿ ಪ್ರವೇಶಾತಿ ಪಡೆದಿದ್ದು, 3ನೇ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಿರುವುದಿಲ್ಲ, ಮೈಸೂರು ವಿಶ್ವವಿದ್ಯಾನಿಲಯದ ನಿಯಮಾನುಸಾರ 2018-19ನೇ ಸಾಲಿಗೆ ಎರಡು ಪಟ್ಟು ಅವಧಿಯು ಮುಗಿದಿರುತ್ತದೆ. ಆದರೆ ಸದರಿ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ ಮಂಡ್ಯದಲ್ಲಿರುವ ಯಾವುದಾದರೂ ಬಿ.ಇಡಿ. ಕಾಲೇಜಿನಲ್ಲಿ ಮೂರನೇ ಸೆಮಿಸ್ಟರ್‌ಗೆ Re-Register ಆಗಿ ತರಗತಿಗೆ ಹಾಜರಾಗಿ ಪರೀಕ್ಷೆ ಬರೆಯಲು ಮಾಡಿರುವ ಮನವಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮತಿ ನೀಡಲಾಯಿತು.** |
| II.3 | 2019 ಜನವರಿ ಹಾಗೂ 2019 ಜುಲೈ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 4ನೇ ಚಾತುರ್ಮಾಸದ ಅವಧಿಕ ಕಾರ್ಯದ ಬದಲಿಗೆ ಚಾರಿತ್ರಿಕ ಅಧ್ಯಯನ ಕರ್ನಾಟಕ ಸಂಸ್ಕೃತಿ-ಆಯ್ದ ಪಠ್ಯಗಳು ಎಂಬ ಪತ್ರಿಕೆಯನ್ನು ನಿಗದಿಪಡಿಸುವ ಬಗ್ಗೆ. |
| ತೀರ್ಮಾನ | **2019 ಜನವರಿ ಹಾಗೂ 2019 ಜುಲೈ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುವಂತೆ ಹಾಗೂ ಸೆಪ್ಟಂಬರ್ 2021ರ ಮಾಹೆಯಲ್ಲಿ 4ನೇ ಸೆಮಿಸ್ಟರ್‌ನ ಪರೀಕ್ಷೆಗಳು ಜರುಗಬೇಕಾಗಿದ್ದು, ಸಮಯದ ಅಭಾವದ ಕಾರಣದಿಂದ ಅವಧಿಕ ಕಾರ್ಯದ ಬದಲಿಗೆ ಚಾರಿತ್ರಿಕೆ ಅಧ್ಯಯನ ಕರ್ನಾಟಕ ಸಂಸ್ಕೃತಿ-ಆಯ್ದ ಪಠ್ಯಗಳು ಅಳವಡಿಸಿಕೊಳ್ಳಲು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

| | |
|---|---|
| II.4 | "Prof. B.S.Vishwanath Gold Medal" "Prof. B.S. Vishwanath Gold Medal-Founder Chairman of Molecular Biology, Department for M.Sc." ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31(2) **(IX)** ಪ್ರಕಾರ ಪ್ರೊ.ಬಿ.ಎಸ್.ವಿಶ್ವನಾಥ್, # 163, 5ನೇ ಮೇನ್, ಎ ಬ್ಲಾಕ್, ವಿಜಯನಗರ, 3ನೇ ಹಂತ, ಮೈಸೂರು ಇವರು **"Prof.B.S.Vishwanath - Gold Medal"** ಒಂದು ಚಿನ್ನದ ಪದಕ ದತ್ತಿ ಮತ್ತು **Prof.B.S.Vishwanath, Founder Chairman of Molecular Biology Department for M.Sc-Gold Medal "** ಎಂಬ ಹೆಸರಿನಲ್ಲಿ ಎರಡು ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ಅನುಮತಿ ಕೋರಿ ಒಟ್ಟು ರೂ.2,00,000/-(ಎರಡು ಲಕ್ಷ ರೂಪಾಯಿಗಳು ಮಾತ್ರ)ಗಳ 02 ಡಿ.ಡಿ.ಗಳನ್ನು ನೀಡಿದ್ದು ಮುಂಬರುವ ವಾರ್ಷಿಕ ಘಟಿಕೋತ್ಸವದಲ್ಲಿ ಸದರಿ ದತ್ತಿಯ ಮೂಲ ಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ಮೂಲ ಧನಕ್ಕೆ ಸೇರಿಸಿ ಶೇಕಡ 80ರಷ್ಟು ಬಡ್ಡಿಯ ಹಣದಲ್ಲಿ ಚಿನ್ನದ ಪದಕಗಳನ್ನು ಅರ್ಹ ಅಭ್ಯರ್ಥಿಗಳಿಗೆ ನೀಡಲು ಕೋರಿರುವುದರಿಂದ<br>1. ಸ್ನಾತಕೋತ್ತರ ಪದವಿಯ **M.Sc. in Biochemistry 2. M.Sc. in Molecular Biology** ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ನಾಲ್ಕು ಸೆಮಿಸ್ಟರ್‌ನಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಕ್ರಮವಾಗಿ ಮೇಲಿನಂತೆ ಚಿನ್ನದ ಪದಕಗಳನ್ನು ನೀಡಬೇಕೆಂದು ಕೋರಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.. |
| II.5 | "ಕಂಬಾಪತಿ ಶ್ರೀನಿವಾಸ ರಾವ್ ಸ್ಮಾರಕ ನಗದು ಬಹುಮಾನ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 31(2) **(IX)** ಪ್ರಕಾರ ಶ್ರೀ ರವಿ ಕಂಬಾಪತಿ, 2019, **Addison CIR, Petaluma. CA 94952. USA.** ಇವರು "ಕಂಬಾಪತಿ ಶ್ರೀನಿವಾಸ ರಾವ್ ಸ್ಮಾರಕ ನಗದು ಬಹುಮಾನ" ಒಂದು ನಗದು ಬಹುಮಾನ ದತ್ತಿಯನ್ನು ಸ್ಥಾಪನೆ ಮಾಡಲು ಅನುಮತಿ ಕೋರಿ ಒಟ್ಟು ರೂ.50,000/-(ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ 01 ಡಿ.ಡಿ.ಯನ್ನು ನೀಡಿದ್ದು ಮುಂಬರುವ ವಾರ್ಷಿಕ ಘಟಿಕೋತ್ಸವದಲ್ಲಿ ಸದರಿ ದತ್ತಿಯ ಮೂಲ ಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ಮೂಲ ಧನಕ್ಕೆ ಸೇರಿಸಿ ಶೇಕಡ 80ರಷ್ಟು ಬಡ್ಡಿಯ ಹಣದಲ್ಲಿ ಸ್ನಾತಕೋತ್ತರ ಪದವಿಯ **M.Sc. Molecular Biology** ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ತೇರ್ಗಡೆಯಾದ ಎರಡನೇ ಅತಿ ಹೆಚ್ಚು ಅಂಕ ಗಳಿಸಿದ ಅರ್ಹ ವಿದ್ಯಾರ್ಥಿಗೆ ನಗದು ಬಹುಮಾನವನ್ನು ನೀಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.. |
| II.6 | Transgender ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯವನ್ನು ನೀಡುವ ಬಗ್ಗೆ. |
| | ಪ್ರೊ. ವೆಂಕಟೇಶ್ ಕುಮಾರ್‌ರವರು ಮಾತನಾಡಿ, ತೃತೀಯಲಿಂಗ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶ ಮಾಡಿಕೊಡುವುದು ಸ್ವಾಗತಾರ್ಹ ಆದರೆ ಹಿಂದುಳಿದ ವರ್ಗಕ್ಕೆ ಮೀಸಲಿರುವ ಪದದ ಬದಲು "ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೃತೀಯಲಿಂಗ ವಿದ್ಯಾರ್ಥಿಗಳಿಗೆ ಒಂದು ಸೀಟು ಮೀಸಲಟ್ಟಿದೆ ಎಂದು ತಿಳಿಸಿದರೆ ಒಳ್ಳೆಯದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. |

| | |
|---|---|
| | ಪ್ರೊ. ರಮೇಶ್‌ರವರು ಮಾತನಾಡಿ, ಮೇಲೆ ತಿಳಿಸಿರುವ ಕೋರ್ಸ್‌ಗಳಿಗೆ ಮಾನದಂಡಗಳು ಸ್ಪಷ್ಟವಾಗಿಲ್ಲವೆಂದು ತಿಳಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಗಳು ಡೀನರುಗಳ ಒಂದು ಸಮಿತಿ ರಚಿಸಿ ಅಲ್ಲಿ ಮಾನದಂಡಗಳ ಸ್ಪಷ್ಟತೆಯ ಕುರಿತು ಚರ್ಚಿಸುವುದಾಗಿ ತಿಳಿಸಿದರು.<br>ಪ್ರೊ. ವೆಂಕಟೇಶ್ ಕುಮಾರ್‌ರವರು ಮಾತನಾಡಿ, ಮಾರ್ಗಸೂಚಿ 4.9ರಲ್ಲಿ Applications of candidates who belong to the following categories should be sent to the'' ಇದರ ಬದಲು Applications of candidates who belong to the following categories shall be sent to the'' ಎಂದು ತಿದ್ದುಪಡಿ ಮಾಡಲು ಸಲಹೆ ನೀಡಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಮಾರ್ಗಸೂಚಿ 4.9ರ ವಾಕ್ಯದಲ್ಲಿ should ಪದದ ಬದಲಾಗಿ shall ಎಂದು ಬದಲಾಯಿಸಲು ಒಪ್ಪಿದರು ಹಾಗೂ ಡೀನ್‌ಗಳ ಸಮಿತಿ ರಚಿಸಿ ಅಲ್ಲಿ ಕೋರ್ಸ್‌ಗಳ ಮಾನದಂಡವನ್ನು ತಿದ್ದುಪಡಿ ಮಾಡಿ ನಂತರ ಮುಂದಿನ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಲಾಗುವುದು ಎಂದು ತಿಳಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಾಲಿ ಚಾಲ್ತಿಯಲ್ಲಿರುವ ಸ್ನಾತಕೋತ್ತರ ಮಾರ್ಗಸೂಚಿ 4.9ರ ಪ್ರಕಾರ ಈಗಾಗಲೇ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶವಿರುವುದರಿಂದ, Admission Reformation committee ನಲ್ಲಿ Transgender ಇವರಿಗೆ ಸೀಟುಗಳ ಹಂಚಿಕೆಯ ಬಗ್ಗೆ Prospectus ಹಾಗೂ ಪ್ರವೇಶಾತಿ ಅರ್ಜಿಯಲ್ಲಿ ನಮೂದಿಸಲು ಹಾಗೂ ಹೆಚ್ಚು ಪ್ರಚಾರ ಮಾಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| III | **ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳು ಮಂಡಿಸಿದ ವಿಷಯಗಳು:** |
| III.1 | Specialized ಕೋರ್ಸ್‌ಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | **ಈ ವಿಷಯವನ್ನು ಮುಂದಿನ ಸಭೆಯಲ್ಲಿ ತೀರ್ಮಾನಿಸಲು ಮುಂದೂಡಲಾಯಿತು.** |
| III.2 | Specialized ಕೋರ್ಸ್‌ಗಳ ವಾಣಿಜ್ಯ ನಿಕಾಯದ ವಿಶೇಷ ಸಭೆಯ ಶಿಫಾರಸ್ಸು ನಿರ್ಣಯಗಳ ಬಗ್ಗೆ. |
| | **ಮಾನ್ಯ ಕುಲಪತಿಗಳು ಮಾತನಾಡಿ, ಕ್ರೆಸ್ಟ್ ಪ್ರಥಮ ದರ್ಜೆ ಕಾಲೇಜು, ಮೈಸೂರು ಇವರ ಸಂಸ್ಥೆಯಲ್ಲಿ ವಿಶೇಷ ಕಾರ್ಯಕ್ರಮ (specialized Programmes)ದ ಅಡಿಯಲ್ಲಿ ಮಾನ್ಯತೆ ಪಡೆದು ನಡೆಸಲಾಗುತ್ತಿರುವ B.Com (Financial Market), B.B.A (Communication and Media Management ) and B.B.A (Modelling and Fashion Management) ೦೩ ಕೋರ್ಸ್‌ಗಳಿಗೆ ರೆಗ್ಯುಲೇಷನ್ಸ್, ಪಠ್ಯಕ್ರಮಗಳು ಹಾಗೂ ಪರೀಕ್ಷಾ ವಿಧಾನ (Scheme of Examination)ಗಳಿಗೆ ಅಧ್ಯಯನ ಮಂಡಳಿ ಹಾಗೂ ವಾಣಿಜ್ಯ ನಿಕಾಯದ ವಿಶೇಷ ಸಭೆಯು ಶಿಫಾರಸ್ಸು ಮಾಡಿರುವುದನ್ನು ಒಪ್ಪಬಹುದಾಗಿದೆ.** |
| ತೀರ್ಮಾನ | **Specialized course i.e. B.Com (Financial Market), B.B.A (Communication and Media Management ) and B.B.A (Modelling and Fashion Management) ಗಳ ರೆಗ್ಯುಲೇಷನ್ಸ್, ಪಠ್ಯಕ್ರಮಗಳು ಹಾಗೂ ಪರೀಕ್ಷಾ ವಿಧಾನ (Scheme of Examination)ಗಳಿಗೆ ಅಧ್ಯಯನ ಮಂಡಳಿ ಹಾಗೂ ವಾಣಿಜ್ಯ ನಿಕಾಯದ ವಿಶೇಷ ಸಭೆಯ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |

| | |
|---|---|
| II.7 Table Agenda | ದೂರಶಿಕ್ಷಣ ಕಾರ್ಯಕ್ರಮದ ಜನವರಿ-2019 ಹಾಗೂ ಜನವರಿ 2020ರ ಆವೃತ್ತಿಗಳಲ್ಲಿ ಪ್ರವೇಶಾತಿ ಹೊಂದಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಎರಡು ಮತ್ತು ಮೂರನೇ ಚಾರ್ತುಮಾಸದ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸದೆ ಹಿಂದಿನ ಪರೀಕ್ಷೆಗಳ ಅಂಕಗಳ/ ಆಂತರಿಕ ಅಂಕಗಳ ಮೇಲೆ ಪರೀಕ್ಷಾ ಫಲಿತಾಂಶ ಪ್ರಕಟಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಕೋವಿಡ್ ಹಿನ್ನೆಲೆಯಿಂದ ಈಗಾಗಲೇ ನಾವು 2 ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ.ನಂ.ಇಡಿ 204 ಯುಎನಿ-2021, 23ನೇ ಜುಲೈ 2021 ರಂದು 2020-21 ನೇ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ವರ್ಷಾಂತ್ಯದ ಚಾತುರ್ಮಾಸ ಅಥವಾ ಅಂತಿಮ ಚಾತುರ್ಮಾಸಗಳಿಗೆ ಮಾತ್ರ ಆಫ್ ಲೈನ್ ಅಥವಾ ಆನ್ ಲೈನ್ ಪರೀಕ್ಷೆಗಳನ್ನು ನಡೆಸುವಂತೆ ಹಾಗೂ ಮದ್ಯಂತರ ಚಾತುರ್ಮಾಸಗಳಿಗೆ **(Intermediate semester/year)** ಪರೀಕ್ಷೆಗಳನ್ನು ಹಿಂದಿನ ಚಾತುರ್ಮಾಸ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಫಲಿತಾಂಶ ಪಡೆದ ಅಂಕಗಳು/ಆಂತರಿಕ ಅಂಕಗಳ ಆಧಾರದಲ್ಲಿ ಫಲಿತಾಂಶವನ್ನು ಪ್ರಕಟಿಸುವಂತೆ ನಿರ್ದೇಶನ ನೀಡಿರುವುದರಿಂದ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಎರಡು ಮತ್ತು ಮೂರನೇ ಚಾರ್ತುಮಾಸದ ವಿದ್ಯಾರ್ಥಿಗಳಿಗೆ ಹಿಂದಿನ ಪರೀಕ್ಷೆ ಅಂಕ/ಆಂತರಿಕ ಅಂಕಗಳ ಆಧಾರದ ಮೇಲೆ ಪರೀಕ್ಷಾ ಫಲಿತಾಂಶ ಪ್ರಕಟಿಸಲಾಗಿದ್ದು, ಈ ಸಂಬಂಧ ವಿದ್ಯಾವಿಷಯಕ ಪರಿಷತಿನ ಅನುಮೋದನೆ ಹಾಗೂ ಅನುಸಮರ್ಥನೆ ಪಡೆಯಲು ಸಭೆಯ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದರು. |
| ತೀರ್ಮಾನ | ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಎರಡು ಮತ್ತು ಮೂರನೇ ಚಾರ್ತುಮಾಸದ ವಿದ್ಯಾರ್ಥಿಗಳಿಗೆ ಹಿಂದಿನ ಪರೀಕ್ಷೆ ಅಂಕ/ಆಂತರಿಕ ಅಂಕಗಳ ಮೇಲೆ ಪರೀಕ್ಷಾ ಫಲಿತಾಂಶ ಪ್ರಕಟಿಸಲಾಗಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು. |

ಇತರೆ ವಿಷಯಗಳು:

1. ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, Speech & Hearing ಶಿಕ್ಷಣ ಸಂಸ್ಥೆಯವರು ಹೆಚ್ಚುವರಿ ಕೋರ್ಸ್‌ಗೆ ಅನುಮತಿ ನೀಡಲು ಕೋರಿರುತ್ತಾರೆ. ಯೋಜನಾ ಉಸ್ತುವಾರಿ ಹಾಗೂ ಮೌಲ್ಯಮಾಪನ ಮಂಡಳಿಯವರು ಸಂಬಂಧಪಟ್ಟ ಡೀನ್ ಹಾಗೂ ವಿಷಯತಜ್ಞರ ಅನುಪಸ್ಥಿತಿಯಲ್ಲಿ ಹೆಚ್ಚುವರಿ ಕೋರ್ಸ್‌ಗೆ ಸಂಶೋಧನಾ ಮಾರ್ಗದರ್ಶಕರನ್ನು ನೇಮಿಸಿರುತ್ತಾರೆ ಆದರೆ ನಿಯಮದ ಪ್ರಕಾರ ಸಂಬಂಧಪಟ್ಟ ಡೀನ್ ಹಾಗೂ ವಿಷಯತಜ್ಞರನ್ನು ಆಹ್ವಾನಿಸಬೇಕಾಗಿರುತ್ತದೆ.

   ಮುಂದುವರೆದು ಪ್ರೊ. ವೆಂಕಟೇಶ್‌ಕುಮಾರ್‌ರವರು ಮಾತನಾಡಿ, JSS ಸಂಸ್ಥೆಯವರು ಸಂಶೋಧನಾ ಕೇಂದ್ರ ಹೊಂದಿದ್ದು ಅಲ್ಲಿ ಖಾಯಂ ಉಪನ್ಯಾಸಕರು (Regular Faculty) ಇರುವುದಿಲ್ಲ, ಅತಿಥಿ ಉಪನ್ಯಾಸಕರಿಗೆ ಪಿಎಚ್.ಡಿ ಮಾರ್ಗದರ್ಶಕರ ಹೊಣೆ ನೀಡಲಾಗುತ್ತಿದೆ. ಇದನ್ನು ತಕ್ಷಣವೇ ರದ್ದುಗೊಳಸಬೇಕು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಆಧ್ಯಾಪಕರನ್ನು

ನೇಮಕಾತಿ ಮಾಡುವ ಮೂಲಕ ಮಾರ್ಗದರ್ಶಕರ ಕೊರತೆ ನೀಗಿಸಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು ಹಾಗೂ ಕಾಯ್ದೆಗಳನ್ನು ತಿದ್ದುಪಡಿ ಮಾಡುವಂತೆ ಕೋರಿದರು. ಇದಕ್ಕೆ ಉತ್ತರವಾಗಿ ಕುಲಸಚಿವರು (ಪರೀಕ್ಷಾಂಗ)ರವರು ದಾಖಲೆಗಳನ್ನು ಒದಗಿಸಿದ್ದಲ್ಲಿ ಮುಂದಿನ ಕ್ರಮಕ್ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಖಾಯಂ ಉಪನ್ಯಾಸಕರುಗಳ ನೇಮಕಾತಿ ಸರ್ಕಾರದಿಂದ ಆಗಬೇಕು, ಅತಿಥಿ ಉಪನ್ಯಾಸಕರಲ್ಲೇ ಅರ್ಹರಿದ್ದೂ ಗೈಡ್ ಕೊಡದೆ ಇದ್ದರೆ, ಅಲ್ಲಿ ಸಂಶೋಧನೆಗಳು ಹೇಗೆ ನಡಯುತ್ತವೆ? ಹಾಗಾಗಿ ಖಾಸಗಿ ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರು ಗೈಡ್‌ಗಳಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶೀಘ್ರವೇ ಖಾಯಂ ನೇಮಕಾತಿ ಸಂಬಂಧ ಸಕಾರದ ಗಮನ ಸೆಳೆಯಲಾಗುವುದು. ಒಂದು ವೇಳೆ ಆಗದಿದ್ದರೆ, ಅತಿಥಿ ಉಪನ್ಯಾಸಕರಾಗಿ ಅರ್ಹತೆಯುಳ್ಳವರಿಗೆ ಕಾಂಟ್ರಾಕ್ಟ್ ಮಾದರಿಯಲ್ಲೇ ನಿಗದಿತ ವರ್ಷಕ್ಕೆ ಗೈಡ್‌ಗಳಂತೆ ನೇಮಕ ಮಾಡಲಾಗುವುದೆಂದು ತಿಳಿಸಿದರು.

2. ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಗಾಂಧಿ ಅಧ್ಯಯನ ಸಂಸ್ಥೆಗಳಲ್ಲಿ ಪಿಹೆಚ್.ಡಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ವಿಷಯವಾರು ಪದವಿಯಾಗಿ ಪರಿಗಣಿಸುವುದರಿಂದ ಮುಂದೆ ಅದೇ ವಿಷಯದಲ್ಲಿ ಅಥವಾ ಕೆಪಿಎಸ್‌ಸಿಯಲ್ಲಿ ಉದ್ಯೋಗ ಪಡೆಯುವುದು ಕಷ್ಟವಾಗುತ್ತಿದೆ. ಆದುದರಿಂದ ಆ ವಿಭಾಗಗಳಲ್ಲಿ ನೀಡುವ ಪಿಹೆಚ್.ಡಿಯನ್ನು ಸಾಮಾನ್ಯ ಪಿಹೆಚ್.ಡಿ ಎಂದೇ ಪರಿಗಣಿಸಬೇಕು ಎಂದು ಕಲಾ ನಿಕಾಯದ ಡೀನರಾದ ಪ್ರೊ. ಮುಜಫರ್ ಅಸಾದಿ ಯವರು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಕುಲಪತಿಗಳು ಮಾತನಾಡಿ, ಈ ವಿಷಯವನ್ನು ಕುರಿತು ಒಂದು ಸಮಿತಿ ರಚಿಸಿ ಕುಲಂಕಷವಾಗಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

3. ಮೈಸೂರು ವಿಶ್ವವಿದ್ಯಾನಿಲಯದ ಉರ್ದು ವಿಭಾಗದ ವಿದ್ಯಾರ್ಥಿಗಳು "Arabic in Middle Eastern Studies" ಐಚ್ಛಿಕ ವಿಷಯವನ್ನು ಮತ್ತೆ ಪ್ರಾರಂಭಿಸುವಂತೆ ಕೋರಿ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ ಎಂದು ಕಲಾ ನಿಕಾಯದ ಡೀನರಾದ ಪ್ರೊ. ಮುಜಫರ್ ಅಸಾದಿಯವರು ತಿಳಿಸಿದರು.

4. ಪ್ರೊ.ವೆಂಕಟೇಶ್‌ಕುಮಾರ್‌ರವರು ಮಾತನಾಡಿ Agri Business ವಿಷಯವು IDS ಅಧ್ಯಯನ ಸಂಸ್ಥೆಯಿಂದ ವಾಣಿಜ್ಯ ವಿಭಾಗಕ್ಕೆ ಸೇರ್ಪಡೆಗೊಳಸಬೇಕೆಂದು ತಿಳಿಸಿದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ ಈ ಒಂದು ಸಮಿತಿಯನ್ನು ರಚಿಸಿದ್ದು ಪ್ರೊ.ಅಯ್ಯಣ್ಣರವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

5. ಶ್ರೀ ದಿನೇಶ್‌ಗಾಂವಕರ್‌ರವರು ಮಾತನಾಡಿ, ಸ್ವಾಯತ್ತ ಕಾಲೇಜಿನ ಪಠ್ಯಕ್ರಮವು Schedule-6ನಲ್ಲಿ ಇದೆ. ಆದರೆ ಮೈಸೂರು ವಿಶ್ವವಿದ್ಯಾನಿಲಯ ಇನ್ನೂ ಸಹ Schedule-3ನಲ್ಲಿ ಇರುವುದರಿಂದ Schedule-6 ಗೆ ಆಧುನೀಕರಿಸಬೇಕೆಂದು ಕೋರಿದರು. ಮಾನ್ಯ ಕುಲಸಚಿವರು ಮಾತನಾಡಿ ಈ ವಿಷಯವನ್ನು ಬರವಣಿಗೆಯಲ್ಲಿ ನೀಡಿದರೆ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಪ್ರೊ. ಹೆಚ್.ರಾಜಶೇಖರ್, ವಾಣಿಜ್ಯ ನಿಕಾಯದ ಡೀನರು ಮಾತನಾಡಿ

ರಾಷ್ಟ್ರೀಯ ಶಿಕ್ಷಣ ನೀತಿ–2020 ಇದೇ ಶೈಕ್ಷಣಿಕ ವರ್ಷ 2021–22 ರಂದು ಜಾರಿಗೆ ಬರುತ್ತಿದ್ದು ಪಠ್ಯಕ್ರಮವು ಹೊಸದಾಗಿ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/– | ಸಹಿ/– |
| **ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಮತ್ತು ಅಧ್ಯಕ್ಷರು** |

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 22-10-2021ರ ಶುಕ್ರವಾರದಂದು 12.00 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿ.

<u>ಸಭೆಗೆ ಹಾಜರಾಗಿದ್ದ ಸದಸ್ಯರುಗಳು</u>

| | | |
|---|---|---|
| 1. | ಪ್ರೊ.ಜಿ.ಹೇಮಂತ್‌ಕುಮಾರ್, ಕುಲಪತಿಗಳು | ... ಅಧ್ಯಕ್ಷರು |
| | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ<br>ಕರ್ನಾಟಕ ಸರ್ಕಾರ, ಬೆಂಗಳೂರು - ಇವರ ಪರವಾಗಿ<br>ಡಾ. ಶಂಕರ್ ಎಸ್ ಎಲ್, ವಿಶೇಷ ಅಧಿಕಾರಿಗಳು | ... ಸದಸ್ಯರು |
| | ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ<br>ಪ್ರಾದೇಶಿಕ ಕಛೇರಿ, ಮೈಸೂರು | ... ಸದಸ್ಯರು |
| 2. | ಶ್ರೀ ಎಂ. ಶ್ರೀನಿವಾಸ್, ವಿಧಾನಸಭಾ | ... ಸದಸ್ಯರು |
| 3. | ಶ್ರೀ ಆರ್.ಧರ್ಮಸೇನ, ಎಂ.ಎಲ್.ಸಿ | ... ಸದಸ್ಯರು |
| 4. | ಡಾ. ಕೆ.ವಿ.ಸುರೇಶ್ | ... ಸದಸ್ಯರು |
| 5. | ಶ್ರೀ ದಿನೇಶ್ ಎಂ ಗಾವಂಕರ್ | ... ಸದಸ್ಯರು |
| 6. | ಡಾ. ಬಿ.ಎನ್.ಆಶಾ | ... ಸದಸ್ಯರು |
| 7. | ಡಾ. ಎಂ. ಶಾರದ | ... ಸದಸ್ಯರು |
| 8. | ಡಾ. ಜಿ.ಗೋವಿಂದರಾಜು | ... ಸದಸ್ಯರು |
| 9. | ಡಾ. ಜೆ. ಎನ್. ವೆಂಕಟೇಶ್ | ... ಸದಸ್ಯರು |
| 10. | ಡಾ. ಬಿ. ರಾಜಣ್ಣ | ... ಸದಸ್ಯರು |
| 11. | ಡಾ. ಹೆಚ್.ಎಂ.ನಿರ್ಮಲ | ... ಸದಸ್ಯರು |
| 12. | ಶ್ರೀ ನಂದೀಶ್ ಎಸ್ | ... ಸದಸ್ಯರು |
| 13. | ಶ್ರೀ ಟಿ.ನಾಗರಾಜು | ... ಸದಸ್ಯರು |
| 14. | ಡಾ. ಪ್ರಶಾಂತ್ ಎಸ್ ಟಿ | ... ಸದಸ್ಯರು |
| 15. | ಪ್ರೊ. ಕೆ.ವಿ.ಅಯ್ಯಣ್ಣ | ... ಸದಸ್ಯರು |
| 16. | ಶ್ರೀ ಹೆಚ್.ಪಿ.ಶಶಿಕುಮಾರ್ | ... ಸದಸ್ಯರು |
| 17. | ಡಾ. ಭಾಗ್ಯಲಕ್ಷ್ಮಿ | ... ಸದಸ್ಯರು |
| 18. | ಡಾ. ಬಿಂಧು ಅನಿಲ್ ಥಾಮಸ್ | ... ಸದಸ್ಯರು |
| 19. | ಶ್ರೀ ಶಿವಕುಮಾರ್ ಎಂ | ... ಸದಸ್ಯರು |
| 20. | ಶ್ರೀ ಎಂ.ಸಿ.ರಾಜಶೇಖರ್ | ... ಸದಸ್ಯರು |
| 21. | ಪ್ರೊ. ವೈ.ಬಿ.ಬಸವರಾಜು | ... ಸದಸ್ಯರು |
| 22. | ಪ್ರೊ. ಎಂ. ಜಿ. ಮಂಜುನಾಥ್ | ... ಸದಸ್ಯರು |
| 23. | ಪ್ರೊ. ರಮೇಶ್ | ... ಸದಸ್ಯರು |
| 24. | ಪ್ರೊ. ಹೆಚ್.ರಾಜಶೇಖರ್ | ... ಸದಸ್ಯರು |
| 25. | ಪ್ರೊ. ಎಂ.ಎಸ್.ಶೇಖರ್ | ... ಸದಸ್ಯರು |
| 26. | ಡಾ.ಸರಸ್ವತಿ, ಗ್ರಂಥಪಾಲಕರು (ಪ್ರಭಾರ), ವಿವಿ ಗ್ರಂಥಾಲಯ | ... ಸದಸ್ಯರು |
| 27. | ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. | ... ಸದಸ್ಯರು |
| 28. | ಪ್ರೊ. ಎನ್.ಕೆ.ಲೋಕನಾಥ್, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ... ಸದಸ್ಯರು |

29. ಡಾ. ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
30. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) ... ಸದಸ್ಯರು
31. ಪ್ರೊ. ಶಿವಪ್ಪ. ಆರ್ ...ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

**ವಿಶೇಷ ಆಹ್ವಾನಿತರು**

32. ಪ್ರೊ. ಜಿ. ವೆಂಕಟೇಶ್‌ಕುಮಾರ್, ಡೀನರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ

**ಸಭೆಗೆ ಹಾಜರಾಗದವರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು
2. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ವಿಧಾನಸಭಾ ಸದಸ್ಯರು
3. ಶ್ರೀ.ಪ್ರೀತಂ ಜೆ ಗೌಡ, ವಿಧಾನಸಭಾ ಸದಸ್ಯರು
4. ಶ್ರೀ ಎಲ್. ನಾಗೇಂದ್ರ, ವಿಧಾನಸಭಾ ಸದಸ್ಯರು
5. ಶ್ರೀ ಎಂ. ಎ. ಗೋಪಾಲಸ್ವಾಮಿ, ಎಂ.ಎಲ್.ಸಿ
6. ಶ್ರೀಮತಿ ನಾಗರತ್ನಮ್ಮ
7. ಡಾ. ವೆಂಕಟೇಶಯ್ಯ
8. ಪ್ರೊ. ಮುಜಾಫರ್ ಹೆಚ್ ಅಸ್ಸಾದಿ
9. ಪ್ರೊ. ನಿಂಗಮ್ಮ ಸಿ ಬೆಟ್ಸೂರ್
10. ಪ್ರೊ. ಜಿ.ಆರ್.ಜನಾರ್ಧನ
11. ಡಾ. ಎಸ್.ಟಿ.ರಾಮಚಂದ್ರ, ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ
12. ಡಾ. ಸಂಗೀತ ಗಜಾನನ್ ಭಟ್, ಹಣಕಾಸು ಅಧಿಕಾರಿ

ಮೊದಲಿಗೆ ಮಾನ್ಯ ಕುಲಸಚಿವರು ಶಿಕ್ಷಣ ಮಂಡಳಿಯ ವಿಶೇಷ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನೂ ಹಾಗೂ ಪತ್ರಿಕಾ ಮಾಧ್ಯಮವರುಗಳನ್ನೂ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| 1 | NEP-2020ರ ಅನ್ವಯ ಕಲಾ ನಿಕಾಯದ ಅಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸ್ಸುಗಳನ್ನು ಶಿಕ್ಷಣ ಮಂಡಳಿ ಸಭೆಯ ಅನುಮೋದನೆ ಬಗ್ಗೆ. |
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ-2020 ರನ್ವಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರು ರಚಿಸಿದ್ದ ವಿಷಯವಾರು ಸಮಿತಿಗಳು ಸಿದ್ಧಪಡಿಸಲಾಗಿದ್ದ ಮಾದರಿ ಪಠ್ಯಕ್ರಮಗಳಂತೆ ಕಲಾ ನಿಕಾಯದ ಅಡಿಯಲ್ಲಿ ಬರುವ ವಿವಿಧ ಅಧ್ಯಯನ ಮಂಡಳಿಗಳು ಶಿಫಾರಸ್ಸು ಮಾಡಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನಗಳನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |
| 2 | NEP-2020ರ ಅನ್ವಯ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಅಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸ್ಸುಗಳನ್ನು ಶಿಕ್ಷಣ ಮಂಡಳಿ ಸಭೆಯ ಅನುಮೋದನೆ ಬಗ್ಗೆ. |

| | |
|---|---|
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ–2020 ರನ್ವಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರು ರಚಿಸಿದ್ದ ವಿಷಯವಾರು ಸಮಿತಿಗಳು ಸಿದ್ಧಪಡಿಸಲಾಗಿದ್ದ ಮಾದರಿ ಪಠ್ಯಕ್ರಮಗಳಂತೆ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಅಡಿಯಲ್ಲಿ ಬರುವ ವಿವಿಧ ಅಧ್ಯಯನ ಮಂಡಳಗಳು ಶಿಫಾರಸ್ಸು ಮಾಡಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನಗಳನ್ನು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| 3 | NEP-2020ರ ಅನ್ವಯ ವಾಣಿಜ್ಯ ನಿಕಾಯದ ಅಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸ್ಸುಗಳನ್ನು ಶಿಕ್ಷಣ ಮಂಡಳ ಸಭೆಯ ಅನುಮೋದನೆ ಬಗ್ಗೆ |
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ–2020 ರನ್ವಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರು ರಚಿಸಿದ್ದ ವಿಷಯವಾರು ಸಮಿತಿಗಳು ಸಿದ್ಧಪಡಿಸಲಾಗಿದ್ದ ಮಾದರಿ ಪಠ್ಯಕ್ರಮಗಳಂತೆ ವಾಣಿಜ್ಯ ನಿಕಾಯದ ಅಡಿಯಲ್ಲಿ ಬರುವ ವಿವಿಧ ಅಧ್ಯಯನ ಮಂಡಳಗಳು ಶಿಫಾರಸ್ಸು ಮಾಡಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನಗಳನ್ನು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| 4 | NEP-2020ರ ಅನ್ವಯ ಶಿಕ್ಷಣ ನಿಕಾಯದ ಅಡಿಯಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸ್ಸುಗಳನ್ನು ಶಿಕ್ಷಣ ಮಂಡಳ ಸಭೆಯ ಅನುಮೋದನೆ ಬಗ್ಗೆ. |
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ–2020 ರನ್ವಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರು ರಚಿಸಿದ್ದ ವಿಷಯವಾರು ಸಮಿತಿಗಳು ಸಿದ್ಧಪಡಿಸಲಾಗಿದ್ದ ಮಾದರಿ ಪಠ್ಯಕ್ರಮಗಳಂತೆ ಶಿಕ್ಷಣ ನಿಕಾಯದ ಅಡಿಯಲ್ಲಿ ಬರುವ ವಿವಿಧ ಅಧ್ಯಯನ ಮಂಡಳಗಳು ಶಿಫಾರಸ್ಸು ಮಾಡಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನಗಳನ್ನು ಶಿಕ್ಷಣ ಮಂಡಳ ಸಭೆಯು ಅನುಮೋದಿಸಿತು. |
| 5 | ವ್ಯಾಸಂಗದ ಎರಡು ಪಟ್ಟು ಅವಧಿ ಮುಗಿದ ನಂತರವೂ ಅನುತ್ತೀರ್ಣರಾಗಿರುವಂತ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡಿರುವ ಬಗ್ಗೆ- ಅನುಸಮರ್ಥನೆಗಾಗಿ. |
| ತೀರ್ಮಾನ | ವ್ಯಾಸಂಗದ ಎರಡು ಪಟ್ಟು ಅವಧಿ ಮುಗಿದ ನಂತರವೂ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಿಂದೆ ವ್ಯಾಸಂಗ ಮಾಡಿದ್ದ ಸ್ಕೀಂ ಹಾಗೂ ಅಭ್ಯಸಿಸಿದ್ದ ಪಠ್ಯಕ್ರಮಕ್ಕೆ ಅನುಗುಣವಾಗಿ ವಿಶೇಷ ಸಂದರ್ಭವೆಂದು ಪರಿಗಣಿಸಿ, ಅಂತಿಮವಾಗಿ ಒಂದು ವರ್ಷದ ಅವಧಿಗೆ (ಒಂದು ಪ್ರಯತ್ನವನ್ನು/ಸೆಮಿಸ್ಟರ್‌ವಾರು) ಪರೀಕ್ಷೆ ಬರೆಯಲು ಒಂದು ಕಾಲಾವಕಾಶ ನೀಡಿ ಈಗಾಗಲೇ ಅಧಿಸೂಚನೆಯನ್ನು ಹೊರಡಿಸಲಾಗಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| 6 | ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠಕ್ಕೆ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮದ ಅನುಮೋದನೆ ಬಗ್ಗೆ. |
| ತೀರ್ಮಾನ | ಶ್ರೀ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಇವರುಗಳ ಹೆಸರಿನಲ್ಲಿ ಅಧ್ಯಯನ ಪೀಠದ ಸ್ಥಾಪನೆಗೆ ಹಾಗೂ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರಡು ಅಧಿನಿಯಮವನ್ನು ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| 7 | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP-2020) ಅನುಸಾರ Regulations Governing the Choice Based Credit System Scheme with Multiple Entry and Exit Options in the Undergraduate and Post-graduate Degree Programs ಗಳನ್ನು ಸರ್ಕಾರದ ಅಂಕಿತಕ್ಕಾಗಿ ಕಳುಹಿಸುವ ಬಗ್ಗೆ. |
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP-2020) ಅನುಸಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯವು ರಚಿಸಿದ್ದ ಸಮಿತಿ ಶಿಫಾರಸ್ಸಿನನ್ವಯ ಸಿದ್ಧಪಡಿಸಲಾಗಿರುವ Regulations Governing the Choice Based Credit System Scheme with Multiple Entry and Exit Options in the Undergraduate and Post-graduate Degree Programs ಅನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| 8 | Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಪರಿಷ್ಕೃತ ಕರಡು ಪರಿನಿಯಮಾವಳಿಯನ್ನು ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು. |
| 9 | "ಡಾ. ಎಸ್. ಶ್ರೀಕಂಠ ಶಾಸ್ತ್ರಿ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31 (2) (IX) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು M.A. in Ancient History and Archaeology ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಡಾ. ಎಸ್.ಶ್ರೀಕಂಠ ಶಾಸ್ತ್ರಿ ಚಿನ್ನದ ಪದಕವನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು. |
| 10 | ಚೈನೀಸ್ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಪರೀಕ್ಷೆ ನಡೆಸುವ ಬಗ್ಗೆ. |
| ತೀರ್ಮಾನ | ಪ್ರಪಂಚದಾದ್ಯಂತ ಕೋವಿಡ್-19 ಸಾಂಕ್ರಾಮಿಕ ವೈರಾಣು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಅಭ್ಯಸಿಸುತ್ತಿರುವ ಚೈನೀಸ್ ವಿದ್ಯಾರ್ಥಿಗಳು ಚೀನಾ ದೇಶದಲ್ಲೇ ಉಳಿದಿರುವುದರಿಂದ ಅವರುಗಳ ಪರೀಕ್ಷೆಗಳಿಗೆ ಅನುಕೂಲವಾಗುವಂತೆ 1, 2, 3 ಮತ್ತು 4ನೇ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಕ್ರಮವಾಗಿ ನವೆಂಬರ್ ಮತ್ತು ಡಿಸೆಂಬರ್ 2021ರ ಮಾಹೆಗಳಲ್ಲಿ ಆನ್‌ಲೈನ್ ಮುಖಾಂತರ ಪರೀಕ್ಷೆಗಳನ್ನು ನಡೆಸಲು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು. |

<u>ಇತರೆ ವಿಷಯಗಳು:</u>

1) ಪ್ರೊ. ಜಿ. ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಶಿಷ್ಯವೇತನದಡಿಯಲ್ಲಿ ಸಂಶೋಧನಾ ಕಾರ್ಯ ನಿರ್ವಹಿಸುತ್ತಿರುವ ಸಂಶೋಧಕರುಗಳಿಗೆ ನಿಯಮಾನುಸಾರ ಶಿಷ್ಯವೇತನ ಹಾಗೂ ಸಾದಿಲ್ವಾರು ಮೊತ್ತವನ್ನು ಮಂಜೂರು ಮಾಡುತ್ತಿರುವುದು ಸರಿಯಷ್ಟೆ. ಆದರೆ, ಕಿರಿಯ ಸಂಶೋಧಕರಿಂದ ಹಿರಿಯ ಸಂಶೋಧಕರೆಂದು ಪರಿಗಣಿಸುವ ಮೊದಲು ತ್ರಿಸದಸ್ಯ ಸಮಿತಿಯ ವರದಿಯನ್ವಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ತ್ರಿಸದಸ್ಯ ಸಮಿತಿಯಲ್ಲಿ ಭಾಗವಹಿಸುವ ಬಾಹ್ಯ ತಜ್ಞರ ದಿನ

ಭತ್ಯೆ/ಪ್ರಯಾಣ ಭತ್ಯೆಯನ್ನು ಸದರಿ ಸಂಶೋಧನಾ ವಿದ್ಯಾರ್ಥಿಯ "ಸಾದಿಲ್ವಾರು" ಹುಂಡಿಯಿಂದ ಭರಿಸಬೇಕೆಂದು ತಿಳಿಸಿರುವುದನ್ನು ರದ್ದುಗೊಳಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಯವರು ಮಾತನಾಡಿ, ಕೂಲಂಕಷವಾಗಿ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

2) ಪ್ರೊ. ಜಿ. ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ ವಿಭಾಗದ ಅಧ್ಯಯನ ಮಂಡಳಿ ಸಭೆಯಲ್ಲಿ ಹಾಜರಾಗುವ ಬಾಹ್ಯ ಪರೀಕ್ಷಕರುಗಳ ದಿನ ಭತ್ಯೆ/ಪ್ರಯಾಣ ಭತ್ಯೆ ಹುಂಡಿಯನ್ನು ಸಿದ್ಧಪಡಿಸಿ, ಹಣಕಾಸು ವಿಭಾಗಕ್ಕೆ ರವಾನಿಸಲಾಯಿತು. ಈ ಸಂಬಂಧ ಹಣಕಾಸು ವಿಭಾಗದವರು ಮೈಸೂರು ವಿಶ್ವವಿದ್ಯಾನಿಲಯವು ಬಿಡುಗಡೆಗೊಳಿಸಿರುವ ಆಯಾ ವಿಭಾಗದ ಸಾದಿಲ್ವಾರು ಹುಂಡಿಯಿಂದ ಬಾಹ್ಯ ಪರೀಕ್ಷಕರುಗಳ ದಿನ ಭತ್ಯೆ / ಪ್ರಯಾಣ ಭತ್ಯೆ ಹುಂಡಿಯ ಮೊತ್ತವನ್ನು ಪಾವತಿಸಬೇಕೆಂದು ಮರು ಟಪಾಲಿನಲ್ಲಿ ವಾಪಸ್ಸು ಕಳುಹಿಸಿರುತ್ತಾರೆ. ಆದರೆ, ವಾರ್ಷಿಕ ಸಾದಿಲ್ವಾರು ಮೊತ್ತವು ಆಯಾಯ ವಿಭಾಗಗಳ ಲೇಖನ ಸಾಮಗ್ರಿಗಳನ್ನು ಖರೀದಿಸುವುದಕ್ಕಾಗಿ ಮಂಜೂರು ಮಾಡಲಾಗಿರುತ್ತದೆ. ಅದರಲ್ಲಿ ಬಾಹ್ಯ ಪರೀಕ್ಷಕರುಗಳ ಹುಂಡಿ ಮೊಬಲಗನ್ನು ಪಾವತಿಸುವುದು ಸೂಕ್ತವಲ್ಲವೆಂದು ತಿಳಿಸಿದರು. ಮುಂದುವರೆದು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಉತ್ತರ ಪತ್ರಿಕೆಗಳನ್ನು ಪ್ರತಿ ವಿಭಾಗಕ್ಕೂ ರವಾನಿಸುವ ಕವರ್‌ಗಳನ್ನು ಗುಣಮಟ್ಟವುಳ್ಳ ಟಪಾಲಿನಲ್ಲಿ ಹಾಗೂ ಪ್ರಶ್ನೆ ಪತ್ರಿಕೆಗಳನ್ನು ಸರಿಯಾದ ರೀತಿಯಲ್ಲಿ ಜೋಡಣೆ ಮಾಡಿ ಕಳುಹಿಸಬೇಕೆಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಮಾತನಾಡಿ, ಅಧ್ಯಯನ ಮಂಡಳಿ ಸಭೆಯಲ್ಲಿ ಹಾಜರಾಗುವ ಬಾಹ್ಯ ಪರೀಕ್ಷಕರುಗಳ ದಿನ ಭತ್ಯೆ / ಪ್ರಯಾಣ ಭತ್ಯೆ ಹುಂಡಿಯ ಮೊಬಲಗನ್ನು ಪಾವತಿಸುವ ಸಂಬಂಧ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು ಅವರುಗಳೊಂದಿಗೆ ಸಮಾಲೋಚಿಸಿ, ಹಣಕಾಸು ವಿಭಾಗದ ವತಿಯಿಂದಲೇ ಬಾಹ್ಯ ಪರೀಕ್ಷಕರುಗಳ ಖಾತೆಗೆ ಮೊಬಲಗನ್ನು ಜಮಾ ಮಾಡಲು ಜರೂರಾಗಿ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಇನ್ನು ಮುಂದೆ ಎಲ್ಲಾ ಕಾಲೇಜು/ವಿಭಾಗಗಳಿಗೆ ಉತ್ತರ ಪತ್ರಿಕೆಗಳನ್ನು ಗುಣಮಟ್ಟವುಳ್ಳ ಕವರ್‌ಗಳೊಂದಿಗೆ ಕಳುಹಿಸಲಾಗುವುದು ಹಾಗೂ ಪ್ರಶ್ನೆ ಪತ್ರಿಕೆಗಳನ್ನು ಸರಿಯಾದ ರೀತಿಯಲ್ಲಿ ಜೋಡಣೆ ಮಾಡಿ ಕಳುಹಿಸಲು ಗಮನಹರಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಸಕ್ರಿಯವಾಗಿ ಪಾಲ್ಗೊಂಡು ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆಗಳನ್ನರ್ಪಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿಗಳು ಮತ್ತು ಅಧ್ಯಕ್ಷರು**